ಗಳುಳ್ಳ ಸಾವಿರಾರು ಶಾಸನ (ಪತ್ರಗಳು) ಗಳನ್ನೊಳಗೊಂಡಿವೆ. ಆಧುನಿಕ ಸಮಾಜದ ಅಗತ್ಯ ಮತ್ತು ಅವಶ್ಯಕತೆಗಳನ್ನು ಕೇಂದ್ರೀಕರಿಸಿರುವ ಬಹಾಉಲ್ಲಾರವರ ಬೋಧನೆಗಳು ವಿವಿಧ ಜನಾಂಗ, ರಾಷ್ಟ್ರ ಹಾಗೂ ಧರ್ಮಗಳನ್ನು ಒಂದೇ ಮಾನವ ಪರಿವಾರದಂತಾಗಿಸುವಂತೆ ಒಂದುಗೂಡಿಸುವ ಹಾಗೂ ಶಾಶ್ವತ ವಿಶ್ವಶಾಂತಿಯ ಸಾಧನೆಯ ಉದ್ದೇಶವನ್ನಿಟ್ಟುಕೊಂಡಿವೆ.

ಇಂದು ಜಗತ್ತಿನ 340ಕ್ಕೂ ಮಿಕ್ಕಿ ರಾಷ್ಟ್ರಗಳು, ಆಶ್ರಿತ ದೇಶಗಳು, ಸಂಸ್ಥಾನಗಳು ದ್ವೀಪಗಳನ್ನೊಳಗೊಂಡ 1,11,000 ಕ್ಕೂ ಹೆಚ್ಚಿನ ಕೇಂದ್ರಗಳಲ್ಲಿ ಬಹಾಯಿಗಳು ವಾಸಿಸುತ್ತಿದ್ದಾರೆ.

ಬಹಾಯಿ ಪವಿತ್ರ ಬರವಣಿಗೆಗಳನ್ನು ಜಗತ್ತಿನ 700ಕ್ಕಿಂತಲೂ ಹೆಚ್ಚಿನ ಭಾಷೆಗಳು ಮತ್ತು ಪ್ರಾಂತೀಯ ಭಾಷೆಗಳಿಗೆ ಭಾಷಾಂತರಿಸಲಾಗಿದೆ.


**ಭಾರತ :** ಭಾರತಕ್ಕೆ ಬಹಾಯಿ ಧರ್ಮವು 1872 ರಲ್ಲಿ ಬಂದಿತು. ಇಂದು ಭಾರತದ 3500ಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಬಹಾಯಿಗಳು ವಾಸಿಸುತ್ತಿದ್ದು, ಸುಮಾರು 10,000 ಬಹಾಯಿ ಆಧ್ಯಾತ್ಮಿಕ ಸಭೆಗಳಿವೆ. ಭಾರತದ ಬಹಾಯಿ ಸಮುದಾಯವು ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಕಾರ್ಯದಲ್ಲಿ ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿದೆ

> "ಪರಮೋನ್ನತವಾದ ಆಧ್ಯಾತ್ಮಿಕತೆ ಮತ್ತು ತೇಜಸ್ಸಿನಿಂದ ಸಲ್ಲಿಸಿದ ಪ್ರಾರ್ಥನೆಯು ಸ್ವೀಕಾರ ಯೋಗ್ಯವಾಗಿರುವುದು ; ಅದರ ವಿಸ್ತರಿಸುವಿಕೆಯನ್ನು ಭಗವಂತ ಒಪ್ಪಿಲ್ಲ ಮತ್ತು ಅವು ಅವನಿಗೆ ಪ್ರಿಯವಿಲ್ಲ, ಪ್ರಾರ್ಥನೆಯಲ್ಲಿ ನಿರ್ಲಿಪ್ತತೆ ಮತ್ತು ಶುದ್ಧತೆ ಹೆಚ್ಚಿದಷ್ಟೂ ಭಗವಂತನ ಸಾನ್ನಿಧ್ಯದಲ್ಲಿ ಅದು ಹೆಚ್ಚಾಗಿ ಸ್ವೀಕಾರವಾಗುವುದು.
> -ಬಾಬ್



ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ :

**ಕರ್ನಾಟಕ ರಾಜ್ಯ ಬಹಾಯಿ ಮಂಡಳಿ, ಬಹಾಯಿ ಕೇಂದ್ರ**
23, ಕಮ್ಮಿಸ್ಸಾರಿಯೇಟ್ ರಸ್ತೆ,
(ಮೇಯೋಹಾಲ್ ಬಳಿ)
ಬೆಂಗಳೂರು-560025
ಫೋನ್ : 545031


KANNADA




ಸಿಡ್ನಿ, ಆಸ್ಟ್ರೇಲಿಯ



ಏಪಿಯ, ಪಶ್ಚಿಮ ಸಮೋಆ

# ಭಾರತ ಉಪ-ಖಂಡದ ಬಹಾಯಿ ಆರಾಧನಾ ಮಂದಿರ

## ಬಹಾಪುರ, ನವದೆಹಲಿ, ಭಾರತ



### ಆರಾಧನಾ ಮಂದಿರದ ಉದ್ದೇಶ

ಬಹಾಯಿ ಆರಾಧನಾ ಮಂದಿರವು ಸೃಷ್ಟಿಕರ್ತನ ನಾಮಸ್ಮರಣೆಯ ಉದಯ ಸ್ಥಾನ ಮತ್ತು ಕೇಂದ್ರವಾಗಿದೆ ಹಾಗೂ ಮಾನವ ಮತ್ತು ಭಗವಂತನ ಪರಸ್ಪರ ಪ್ರೀತಿಯನ್ನು ವ್ಯಕ್ತಪಡಿಸುವಂತೆ ಅದನ್ನು ರೂಪಿಸಲಾಗಿದೆ. ಬಹಾಯಿ ಆರಾಧನಾ ಮಂದಿರವು ಧರ್ಮ, ಜನಾಂಗ, ರಾಷ್ಟ್ರೀಯತೆ, ವರ್ಣ, ಭಾಷೆ ಅಥವಾ ಮತಗಳನ್ನು ಲೆಕ್ಕಿಸದೆ ಸಕಲ ಜನರಿಗೂ ತೆರೆದಿರುತ್ತದೆ. ಇದು ಮೌನವಾಗಿ ಧ್ಯಾನ ಮಾಡಲು ಇರುವ ಒಂದು ಸ್ಥಳವಾಗಿದೆ.

### ಭವಿಷ್ಯದಲ್ಲಿ,

ವಿದ್ಯೆಯನ್ನು ಪ್ರಸರಿಸುವ ಶಾಲೆಗಳು ಹಾಗೂ ವಾಚನಾಲಯಗಳು, ರೋಗಿ ಹಾಗೂ ಅಶಕ್ತರ ಸೇವೆಗಾಗಿ ಆಸ್ಪತ್ರೆಗಳು, ವೃದ್ಧರಿಗಾಗಿ ಅನಾಥಾಲಯ ಹಾಗೂ ಗೃಹ ಸೌಲಭ್ಯ ಮುಂತಾದ ಮಾನವೀಯ ಹಾಗೂ ಸಾಮಾಜಿಕ ಸೇವಾ ಸಂಸ್ಥೆಗಳು ಈ ಕಟ್ಟಡದ ಸುತ್ತ ಇರುವುವು. ನಿಜಾರ್ಥದಲ್ಲಿ ಮಾತುಗಳನ್ನು ಕೃತಿಗಿಳಿಸಿದಾಗ ಮಾತ್ರ ಬಹಾಯಿ ಆರಾಧನೆಯು ಪೂರ್ಣಗೊಳ್ಳುವುದು.

**ಈ ಆರಾಧನಾ ಮಂದಿರ**

* ವಿಶ್ವದ ಬಹಾಯಿ ಆರಾಧನಾ ಮಂದಿರಗಳ ಸರಮಾಲೆಯಲ್ಲಿ ಭಾರತ ಉಪ-ಖಂಡದ ಆರಾಧನಾ ಮಂದಿರವು ಏಳನೆಯದಾಗಿದೆ.

* 1953ರ ಕೊನೆಯಲ್ಲಿ ನವದೆಹಲಿಯಲ್ಲಿ ಇದರ ಜಾಗವನ್ನು ಖರೀದಿಸಲಾಯಿತು.

* ನಿರ್ಮಾಣ ಕಾರ್ಯವು 1980ರ ಏಪ್ರಿಲ್ 21 ರಂದು ಪ್ರಾರಂಭವಾಗಿ, ಕಟ್ಟಡವನ್ನು ಪೂರ್ವಭಾವಿಯಾಗಿ 1986ರ ಡಿಸೆಂಬರ್ 24 ರಂದು ದೇವರ ಏಕತ್ವ, ಧರ್ಮಗಳ ಏಕತೆ ಹಾಗೂ ಮಾನವ ಜನಾಂಗದ ಏಕತ್ವಕ್ಕಾಗಿ ಸಮರ್ಪಿಸಲಾಯಿತು.

* ಸಾಮಾನ್ಯವಾಗಿ ಭಾರತದ ಎಲ್ಲಾ ಧರ್ಮಗಳಲ್ಲಿ ತಾವರೆಯ ಸಂಬಂಧವಿದ್ದು ಅದನ್ನು ವಿಶ್ವಧರ್ಮ ಚಿಹ್ನೆಯನ್ನಾಗಿ ಪರಿಗಣಿಸಿರುವುದರಿಂದ ಈ ಮಂದಿರವನ್ನು ವಾಸ್ತುಶಿಲ್ಪಿ ಶ್ರೀಯುತ ಫರೀಬೋರ್ಜ್ ಸಾಭಾರವರು ತಾವರೆಯಾಕಾರದಲ್ಲಿ ರೂಪಿಸಿರುವರು.

* ಈ ಬಹಾಯಿ ಮಂದಿರವು ಭಾರತದ ಬಹಾಯಿ ಸಮುದಾಯದ ಹಾಗೂ ಪ್ರಪಂಚದ ಬಹಾಯಿಗಳು ನೀಡಿದ ಸ್ವಯಂ ಕಾಣಿಕೆಗಳಿಂದ ಕಟ್ಟಲ್ಪಟ್ಟಿದೆ.

* ಈ ಕಟ್ಟಡವು ಪ್ರಧಾನವಾದ ಆರಾಧನಾ ಮಂದಿರವನ್ನಲ್ಲದೆ ಸ್ವಾಗತ ಕೇಂದ್ರ, ವಾಚನಾಲಯ, ದೃಶ್ಯ – ಶ್ರವಣ ಕೊಠಡಿ ಹಾಗೂ ಆಡಳಿತ ಕಚೇರಿಗಳನ್ನೊಳಗೊಂಡ ಉಪ ವಿಭಾಗವನ್ನೂ ಒಳಗೊಂಡಿದೆ.

* ಆರಾಧನಾ ಮಂದಿರದ ಸುತ್ತಲೂ ಸುಂದರ, ವಕ್ರಾಕಾರದ ಕಟಕಟೆ, ಸೇತುವೆಗಳು ಮತ್ತು ಮೆಟ್ಟಿಲುಗಳನ್ನೊಳಗೊಂಡಿರುವ ಕಾಲ್ದಾರಿಗಳಿವೆ. ಕೇಂದ್ರ ಕಟ್ಟಡವು ತೇಲುವ ತಾವರೆಯ ಹಸಿರು ಎಲೆಗಳನ್ನು ಪ್ರತಿನಿಧಿಸುತ್ತಿರುವ ಒಂಭತ್ತು ಕೊಳಗಳಿಂದ ಸುತ್ತುವರಿಯಲ್ಪಟ್ಟಿದೆ.

* ತಾವರೆಯ ದಳಗಳನ್ನು ಶ್ವೇತ ವರ್ಣದ ಕಾಂಕ್ರೀಟ್‌ನಿಂದ ನಿರ್ಮಿಸಲಾಗಿದೆ. ದಳಗಳ ಹೊರಬದಿಯು ಅಮೃತ ಶಿಲೆಯಿಂದ ಹೊದಿಸಲ್ಪಟ್ಟಿದೆ.

* ತಮ್ಮ ತಮ್ಮ ಪ್ರಾರ್ಥನೆಗಳನ್ನು ಮೌನವಾಗಿ ಹೇಳಲು ಹಾಗೂ ಧ್ಯಾನಿಸಲು ಈ ಆರಾಧನಾ ಮಂದಿರದಲ್ಲಿ ಪ್ರತಿಯೊಬ್ಬರಿಗೂ ಸ್ವಾಗತವಿದೆ.

**ಬಹಾಯಿ ಧರ್ಮ**

1844 ರಲ್ಲಿ ಪ್ರಾರಂಭವಾದ ಬಹಾಯಿ ಧರ್ಮವು ಸ್ವತಂತ್ರವಾದ ವಿಶ್ವ ಧರ್ಮವಾಗಿದೆ. ಬಹಾಉಲ್ಲಾರವರು, ಅಂದರೆ 'ದೇವರ ಜ್ಯೋತಿ' ವಿಶ್ವಧರ್ಮಗಳ ಹೊಸ ಅಧ್ಯಾಯದ ಲೇಖಕರಾಗಿರುವರು.

ಬಹಾಉಲ್ಲಾರವರು 1817ನೇ ನವೆಂಬರ್ 12 ರಂದು ಪರ್ಷಿಯಾ ದೇಶದ ಪ್ರಸಿದ್ಧ ಕುಟುಂಬವೊಂದರಲ್ಲಿ ಜನಿಸಿದರು. ದೇವರು ಒಬ್ಬನೇ, ಧಾರ್ಮಿಕ ಸತ್ಯವು ಅನಿರ್ಬಂಧಿತವಾಗಿರದಿದ್ದರೂ ಪೂರಕವಾಗಿದೆ, ಮಾನವನ ಆಧ್ಯಾತ್ಮಿಕ ವಿಕಾಸಕ್ಕೆ ಮಾರ್ಗದರ್ಶನ ನೀಡುವ ದಿವ್ಯ ಬೋಧನೆಗಳನ್ನೊಳಗೊಂಡ ಧರ್ಮವು ಪ್ರಗತಿಶೀಲವಾಗಿದೆ ಎಂಬುದನ್ನು ಜಗತ್ತಿಗೆ ಘೋಷಿಸಲು ಅವರು ತನ್ನ ಭೋಗ ಜೀವನವನ್ನು ತ್ಯಾಗ ಮಾಡಿದರು. "ಮಾನವ ಜನಾಂಗ ಒಂದು ಹಾಗೂ ಇಡೀ ಪೃಥ್ವಿಯೇ ಒಂದು ರಾಷ್ಟ್ರ ಮತ್ತು ಮಾನವ ಜನಾಂಗ – ಅದರ ಪ್ರಜೆಗಳು" ಎಂದು ಅವರು ಘೋಷಿಸಿದರು.


ತಾನು ಭಗವಂತನ ಸಂದೇಶವಾಹಕ ಎಂಬುದು 1853 ರಲ್ಲಿ ಅವರಿಗೆ ಪ್ರಪ್ರಥಮವಾಗಿ ತಿಳಿದುಬಂದಿತು. ಅವರು ಇರಾಕಿನ ಬಾಗ್ದಾದಿಗೆ ಗಡೀಪಾರಾಗಿ ಹೋದ 10 ವರ್ಷಗಳ ಬಳಿಕ ಪ್ರಪಂಚದ ಎಲ್ಲಾ ಧರ್ಮಗಳೂ ಭವಿಷ್ಯ ನುಡಿದ ಧರ್ಮ - ಭರವಸಿಗ ತಾನೇ ಎಂದು ಸಾರ್ವಜನಿಕವಾಗಿ ಘೋಷಿಸಿದರು. ಇಸ್ತಾಂಬುಲ್‌ನ ಕಾನ್‌ಸ್ಟ್ಯಾಂಟಿನೋಪಲ್ ಮತ್ತು ಅಡ್ರಿಯೊನೋಪಲ್‌ಗೆ ಗಡೀಪಾರಾಗಿ ಹೋದ ಅವರು ಕೊನೆಯದಾಗಿ 1868 ರಲ್ಲಿ ಕ್ರೈಸ್ತರ ಪವಿತ್ರ ಸ್ಥಳವಾದ ಕಾರಾಗೃಹ-ನಗರ ಅಕ್ಕಾ ಎಂಬಲ್ಲಿಗೆ ಗಡೀಪಾರಾದರು.

ಸುಮಾರು 40 ವರ್ಷಗಳ ಗಡೀಪಾರು ಶಿಕ್ಷೆ, ಸೆರೆಮನೆವಾಸ ಮತ್ತು ಕಷ್ಟ - ಸಂಕಷ್ಟಗಳ ಬಳಿಕ ಬಹಾಉಲ್ಲಾರವರು 1892 ರಲ್ಲಿ ಸ್ವರ್ಗಸ್ಥರಾದರು.


ಬಹಾಉಲ್ಲಾರವರ ಬರವಣಿಗೆಗಳು ಮಾನವ ಪೂರ್ವಿಕೆಯ ತೀರ ವ್ಯಕ್ತಿಗತವಾದ ವಿಷಯದಿಂದ ಹಿಡಿದು ಗಹನ ಗಂಭೀರವಾದ ವಿಷಯ




ಪನಾಮ ನಗರ, ಪನಾಮ



ಕಂಪಾಲ, ಉಗಾಂಡ



ವಿಲ್ಮೆಟ್ಟೆ, ಇಲಿನಾಸ್, ಅಮೇರಿಕ



ಫ್ರಾಂಕ್‌ಫರ್ಟ್, ಪಶ್ಚಿಮ ಜರ್ಮನಿ

**ವಿಶ್ವದಾದ್ಯಂತವಿರುವ ಬಹಾಯಿ ಪ್ರಾರ್ಥನಾ ಮಂದಿರಗಳು**